ಕ್ರ.ಸಂ.	ಘಟಕ	ಕ್ರಿಯಾ ಯೋಜನೆಯಂತೆ ಒದಗಿಸಲುದ್ದೇಶಿಸಿದ ವಾಹನಗಳ ಸಂಖ್ಯೆ	ಜನವರಿ–15ರ ಅಂತ್ಯದ ವರೆಗೆ ಒದಗಿಸಿದ ವಾಹನಗಳ ಸಂಖ್ಯೆ
1	ಘಟಕ–1	17	6
2	ಘಟಕ–2	14	4
3	ಲಿಂಗಸ್ಗೂರ	17	7
4	ಸಿಂಧನೂರು	15	7
5	ಮಾನ್ವಿ	08	3
6	ದೇವದುರ್ಗ	05	2
7	ಮಸ್ಕಿ	04	0
	ಒಟ್ಟು	**80**	**29**

ಐಟಿ–ಬಿಟಿ ಕಂಪನಿಗಳು

1637(1245); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ರಾಜ್ಯದಲ್ಲಿರುವ ಐಟಿ–ಬಿಟಿ ಕಂಪನಿಗಳ ಸಂಖ್ಯೆ ಎಷ್ಟು; ಐಟಿ–ಬಿಟಿ ಕಂಪನಿಗಳಿಗೆ ಸರ್ಕಾರ ನೀಡಿರುವ ಸೌಲಭ್ಯಗಳೇನು; ಯಾವ ಯಾವ ಮಾನದಂಡಗಳ ಮೇಲೆ ಈ ಐಟಿ–ಬಿಟಿ ಕಂಪನಿಗಳಿಗೆ ಸೌಲಭ್ಯಗಳನ್ನು ನೀಡಲಾಗಿದೆ; ಸೌಲಭ್ಯಗಳನ್ನು ಉಪಯೋಗಿಸಿಕೊಂಡಿರುವ ಐಟಿ–ಬಿಟಿ ಕಂಪನಿಗಳು ಸರ್ಕಾರಕ್ಕೆ ತೆರಿಗೆ ಕಟ್ಟದಿರುವ ಬಗ್ಗೆ ಮಾಹಿತಿ ನೀಡುವುದು;

ಆ) ಹಾಗಿದ್ದಲ್ಲಿ; ತೆರಿಗೆ ಕಟ್ಟದಿರಲು ಕಾರಣಗಳೇನು; ತೆರಿಗೆ ಕಟ್ಟದಿರುವ ಕಂಪನಿಗಳ ಮೇಲೆ ಸರ್ಕಾರ ಯಾವ ಮಾನದಂಡಗಳನ್ನು ಆಧಾರಿಸಿ ರಾಜಸ್ವ ವಸೂಲಿ ಮಾಡಲು ಕೈಗೊಂಡಿರುವ ಕ್ರಮಗಳೇನು; (ಐಟಿ–ಬಿಟಿ ಕಂಪನಿವಾರು ವಿವರ ನೀಡುವುದು);

ಇ) ರಾಯಚೂರು ಜಿಲ್ಲೆಯಲ್ಲಿ ಐಟಿ–ಬಿಟಿ ಕಂಪನಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ರಾಯಚೂರು ಜಿಲ್ಲೆಯಲ್ಲಿ ಐಟಿ–ಬಿಟಿ ಕಂಪನಿಗಳ ಸ್ಥಾಪನೆ ಕುರಿತು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ರಾಜ್ಯದಲ್ಲಿ ಸುಮಾರು 2500 ಮಾಹಿತಿ ತಂತ್ರಜ್ಞಾನ ಕಂಪನಿಗಳು 226 ಜೈವಿಕ ತಂತ್ರಜ್ಞಾನ ಕಂಪನಿಗಳು ಇವೆ. ರಾಜ್ಯ ಸರ್ಕಾರವು ರಾಜ್ಯದ ಮಾಹಿತಿ ತಂತ್ರಜ್ಞಾನದ ಉದ್ಯಿಮೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಐ4 ಪಾಲಿಸಿಯನ್ನು ಘೋಷಿಸಿರುತ್ತದೆ. ಹೊಸದಾಗಿ ತೆರೆಯಲ್ಪಡುವ ಮಾಹಿತಿ ತಂತ್ರಜ್ಞಾನ ಕಂಪನಿಗಳಿಗೆ/ಮಾಹಿತಿ ತಂತ್ರಜ್ಞಾನೇತರ ಸೇವೆಗಳು/ಸ್ಟಾರ್ಟ್‌ಅಪ್ಸ್ ಮುಂತಾದವುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗಿದೆ.

ಅ) ಬಿಬಿಎಂಪಿ ವಲಯದ ಹೊರಗಡೆ ತೆರೆಯಲ್ಪಡುವ ಮಾಹಿತಿ ತಂತ್ರಜ್ಞಾನ ಉದ್ಯಿಮೆಗಳಿಗೆ ಉದ್ಯೋಗಾಧರಿತ ಪ್ರೋತ್ಸಾಹಕವಾಗಿ ಜಮೀನು ಹಂಚಿಕೆ.

ಆ) ಪಿಎಫ್/ಇಎಸ್‌ಐ ಮರುಪಾವತಿ.

ಇ) ರಿಯಾಯತಿ ದರದಲ್ಲಿ ವಿದ್ಯುಚ್ಛಕ್ತಿ

ಈ) ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ

ಐಟಿ,ಬಿಟಿ ಕಂಪನಿಗಳಿಗೆ ಜಮೀನು ಹಂಚಿಕೆಯು ಉದ್ಯೋಗದ ಸೃಷ್ಟಿಯನ್ನು ಅವಲಂಬಿಸಿದೆ. ಮಾಹಿತಿ ತಂತ್ರಜ್ಞಾನ ಕಂಪನಿಗಳು ಕಂಪ್ಯೂಟರ್, ಕಂಪ್ಯೂಟರ್ ಪೆರಿಫೆರಲ್ಸ್ ಮತ್ತು ತಂತ್ರಾಂಶಗಳಿಗೆ ಕಡ್ಡಾಯವಾಗಿ 5.5% ಮೌಲ್ಯಾಧಾರಿತ ತೆರಿಗೆಯನ್ನು

ಪಾವತಿಸಬೇಕಾಗಿರುತ್ತದೆ. ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ ಇವರು ತೆರಿಗೆ ವಂಚಿಸಿದವರ ವಿರುದ್ದ ಕ್ರಮ ಕೈಗೊಳ್ಳಲು ಅಧಿಕಾರ ಹೊಂದಿದವರಾಗಿರುತ್ತಾರೆ.

ಆ) ಮೇಲೆ ತಿಳಿಸಿರುವಂತೆ ಈ ವಿಷಯವು ವಾಣಿಜ್ಯ ತೆರಿಗೆ ಇಲಾಖೆ ಇವರ ವ್ಯಾಪ್ತಿಯಲ್ಲಿ ಬರುತ್ತದೆ.

ಇ) ಮಾಹಿತಿ ತಂತ್ರಜ್ಞಾನ ಇಲಾಖೆಯಲ್ಲಿ ಈ ತರಹದ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಸರ್ಕಾರದ ಯೋಜನೆಗಳು

1638(1246); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ತಾಯಿಭಾಗ್ಯ, ಮಡಿಲು, ವಾಜಪೇಯಿ ಆರೋಗ್ಯ, ರಾಷ್ಟ್ರೀಯ ಭೀಮಾ ಸ್ವಾಸ್ಥ್ಯ, ಸಂಜೀವಿನಿ ಸೇರಿದಂತೆ ಎಷ್ಟು ಯೋಜನೆಗಳು ಇಲಾಖಾ ವ್ಯಾಪ್ತಿಯಲ್ಲಿವೆ; ಈ ಯೋಜನೆಗಳಲ್ಲಿ ರಾಜ್ಯಾದಾದ್ಯಂತ ಎಷ್ಟು ಫಲಾನುಭವಿಗಳಿದ್ದಾರೆ; (ಪ್ರತಿ ಯೋಜನೆಗಳು ಒಳಗೊಂಡಂತೆ ತಾಲ್ಲೂಕುವಾರು ವಿವರ ನೀಡುವುದು).

ಆ) ಈ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಬಿಡುಗಡೆಗೊಂಡ ಅನುದಾನದಲ್ಲಿ ಖರ್ಚಾಗಿರುವ ಹಾಗೂ ಖರ್ಚಾಗದೇ ಉಳಿದಿರುವ ಹಣ ಎಷ್ಟು; ಹಣ ಖರ್ಚಾಗದಿರಲು ಕಾರಣಗಳೇನು;

ಇ) ಯೋಜನೆಗಳ ಫಲಾನುಭವಿಗಳಿಗೆ ಸರ್ಕಾರ ನಿಗದಿಪಡಿಸಿರುವ ಹಣ ಎಷ್ಟು (ಯೋಜನೆಗಳವಾರು ವಿವರ ನೀಡುವುದು); ರಾಯಚೂರು ಜಿಲ್ಲೆಯಲ್ಲಿ ಸದರಿ ಯೋಜನೆಗಳಿಗೆ ಒಳಪಡುವ ಫಲಾನುಭವಿಗಳ ಸಂಖ್ಯೆ ಎಷ್ಟು;